"ELECTION URGENT"

सत्यमेव जयते

# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ಕಟ್ಟಡದ (ಹಿಂಭಾಗ), 1ನೇ ಮಹಡಿ,
ನಂ. 8, ಕನ್ನಿಂಗ್ ಹ್ಯಾಂ ರಸ್ತೆ. ಬೆಂಗಳೂರು-560052.

## ರಾಜ್ಯ ಚುನಾವಣಾ ಆಯೋಗದ ನಡವಳಿ

ವಿಷಯ : ಗ್ರಾಮ ಪಂಚಾಯತಿ ಸಾರ್ವತ್ರಿಕ ಚುನಾವಣೆ-2020 ರಾಯಚೂರು ಜಿಲ್ಲೆ, ರಾಯಚೂರು ತಾಲ್ಲೂಕು ಬಿಜನಗೇರಾ ಗ್ರಾಮ ಪಂಚಾಯಿತಿ ಚುನಾವಣೆ ಮುಂದುವರೆಸುವ ಬಗ್ಗೆ.

ಓದಲಾಗಿದೆ : 1. ಆಯೋಗದ ಆದೇಶ ಸಂಖ್ಯೆ ರಾಚುಆ.134.ಇಜಿಪಿ.2020, ದಿನಾಂಕ: 30.11.2020.
2. ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ರವರ ಅಧಿಸೂಚನೆ ಸಂಖ್ಯೆ: ಕಂ/ಚುನಾವಣೆ/ಗ್ರಾಪಂ/84/2020-21, ದಿನಾಂಕ:07.12.2020.
3. ಮಾನ್ಯ ಉಚ್ಚ ನ್ಯಾಯಾಲಯ ಕಲಬುರಗಿ ಪೀಠ ಕಲಬುರಗಿ ರಿಟ್ ಪಿಟಿಷನ್ ಸಂಖ್ಯೆ: 226763/2020ರ ಆದೇಶ ದಿನಾಂಕ: 30.11.2020.
4. ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ರವರ ಅಧಿಕೃತ ಜ್ಞಾಪನ ಸಂಖ್ಯೆ: ಕಂ/ಚುನಾವಣೆ/ಗ್ರಾಪಂ/88/2020-21, ದಿನಾಂಕ: 17.12.2020 ಮತ್ತು 23.11.2020ರ ನಡವಳಿ ಹಾಗೂ ಪತ್ರ ದಿನಾಂಕ: 24.12.2020 ಮತ್ತು 25.12.2020.

---

**ಪ್ರಸ್ತಾವನೆ:**

ಮೇಲ್ಕಂಡ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಆಯೋಗದ ಆದೇಶದಲ್ಲಿ ರಾಜ್ಯದಲ್ಲಿ ಅವಧಿ ಮುಕ್ತಾಯವಾಗಿರುವ ಗ್ರಾಮ ಪಂಚಾಯಿತಿಗಳಿಗೆ ಸಾರ್ವತ್ರಿಕ ಚುನಾವಣೆ ನಡೆಸಲು ಆದೇಶಿಸಲಾಗಿದೆ.

ರಾಜ್ಯ ಚುನಾವಣಾ ಆಯೋಗದ ಕ್ರಮ ಸಂಖ್ಯೆ (1)ರ ಆದೇಶದಂತೆ ಜಿಲ್ಲಾಧಿಕಾರಿಗಳು ರಾಯಚೂರು ಜಿಲ್ಲೆಯ ಇವರು ಕ್ರಮ ಸಂಖ್ಯೆ (2) ರಲ್ಲಿ ರಾಯಚೂರು ತಾಲ್ಲೂಕಿನ ಅವಧಿ ಮುಕ್ತಾಯವಾಗಿರುವ ಗ್ರಾಮ ಪಂಚಾಯಿತಿಗಳಿಗೆ ಚುನಾವಣೆಯನ್ನು ನಡೆಸಲು ಪ್ರಪತ್ರ-2 ರಲ್ಲಿ ಚುನಾವಣಾ ಅಧಿಸೂಚನೆಯನ್ನು ಹೊರಡಿಸಿರುತ್ತಾರೆ.

ಮೇಲ್ಕಂಡ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಮಾನ್ಯ ಉಚ್ಚ ನ್ಯಾಯಾಲಯ, ಕಲಬುರಗಿ ಪೀಠ, ರಿಟ್ ಅರ್ಜಿ ಸಂಖ್ಯೆ: 226763/2020 (ಎಲ್‌ಬಿಇಎಲ್‌ಇ)ದ ದಿನಾಂಕ: 30.11.2020ರ ಆದೇಶದಲ್ಲಿ ಜಿಲ್ಲಾಧಿಕಾರಿಗಳು ರಾಯಚೂರು ಜಿಲ್ಲೆ ಇವರು ದಿನಾಂಕ: 11.09.2020 ರಂದು ಹೊರಡಿಸಿರುವ ಬಿಜನಗೇರಾ ಗ್ರಾಮ ಪಂಚಾಯಿತಿ ಸದಸ್ಯ ಸ್ಥಾನಗಳಿಗೆ ನಿಗದಿಪಡಿಸಿದ್ದ ಮೀಸಲಾತಿ ಅಧಿಸೂಚನೆಯನ್ನು ರದ್ದುಪಡಿಸಿರುತ್ತಾರೆ.

ಪುಟ 2ಕ್ಕೆ...

ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರ ಕ್ರಮ ಸಂಖ್ಯೆ (4)ರ ದಿನಾಂಕ: 17.12.2020ರ ಅಧಿಕೃತ ಜ್ಞಾಪನದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಬಿಜನಗೇರಾ ಗ್ರಾಮ ಪಂಚಾಯಿತಿ ಚುನಾವಣೆ ನಡೆಸಲು ದಿನಾಂಕ: 07.12.2020 ರಂದು ಪ್ರಪತ್ರ–2 ರಲ್ಲಿ ಹೊರಡಿಸಿದ್ದ ಚುನಾವಣಾ ಅಧಿಸೂಚನೆಯನ್ನು ಹಿಂಪಡೆದಿರುತ್ತಾರೆ. ಇದರಿಂದ ಬಿಜನಗೇರಾ ಗ್ರಾಮ ಪಂಚಾಯಿತಿ ಚುನಾವಣೆ ಪ್ರಕ್ರಿಯೆಯು ಮುಂದುವರೆಯದೆ ಸ್ಥಗಿತಗೊಂಡಿರುತ್ತದೆ.

ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರ ದಿನಾಂಕ: 24.12.2020ರ ಪತ್ರದಲ್ಲಿ ಮಾನ್ಯ ನ್ಯಾಯಾಲಯದ ಆದೇಶದಂತೆ, ಅಗತ್ಯ ಕ್ರಮ ಕೈಗೊಂಡು ದಿನಾಂಕ: 11.12.2020ರ ಹೊರಡಿಸಲಾದ ಮೀಸಲಾತಿ ಅಧಿಸೂಚನೆಯನ್ನು ದೃಢೀಕರಿಸಿರುವುದಾಗಿ ತಿಳಿಸಿರುತ್ತಾರೆ. ದಿನಾಂಕ: 23.12.2020ರ ನಡವಳಿಯಲ್ಲಿ ರಿಟ್ ಅರ್ಜಿದಾರರಿಗೆ ನೋಟೀಸ್ ನೀಡಿ ವಿಚಾರಣೆ ನಡೆಸಿದ್ದು ಅರ್ಜಿದಾರರು ಲಿಖಿತ ಹೇಳಿಕೆ ನೀಡಿ, ದಿನಾಂಕ: 18.08.2020ರ ಅಧಿಸೂಚನೆಯಂತೆ ಆಗಿರುವ ಮೀಸಲಾತಿಯನ್ನು ಮುಂದುವರೆಸುವಂತೆ ವಿನಂತಿಸಿರುವುದರಿಂದ ಇವರ ದಿನಾಂಕ: 24.11.2020ರ ಅರ್ಜಿಯನ್ನು ತಿರಸ್ಕರಿಸಿರುವುದಾಗಿಯೂ, ತತ್ಪರಿಣಾಮವಾಗಿ ದಿನಾಂಕ: 11.09.2020 ರಂದು ಹೊರಡಿಸಲಾದ ಅಧಿಸೂಚನೆಯನ್ನು ಧೃಡೀಕರಿಸಿರುವುದಾಗಿ ಆದೇಶಿಸಿರುತ್ತಾರೆ.

ಮೇಲ್ಕಂಡ ಗ್ರಾಮ ಪಂಚಾಯಿತಿ ಕ್ಷೇತ್ರಗಳ ಚುನಾವಣಾ ಅಧಿಸೂಚನೆಯನ್ನು ದಿನಾಂಕ: 07.12.2020 ರಂದು ಹೊರಡಿಸಿದ್ದು, ಚುನಾವಣಾ ವೇಳಾಪಟ್ಟಿಯಂತೆ ಚುನಾವಣೆ ಪ್ರಕ್ರಿಯೆ ನಡೆದಿದ್ದು, ಅಂತಿಮ ಕಣದಲ್ಲಿ 56 ಅಭ್ಯರ್ಥಿಗಳು ಸ್ಪರ್ಧೆಯಲ್ಲಿ ಇರುವುದಾಗಿ ತಿಳಿಸಿರುತ್ತಾರೆ. ದಿನಾಂಕ: 18.12.2020 ರವರೆಗೆ ನಡೆದಿರುವ ಚುನಾವಣಾ ಸಂಬಂಧದ ಪ್ರಕ್ರಿಯೆಯ ಎಲ್ಲಾ ದಾಖಲಾತಿಗಳನ್ನು ಚುನಾವಣಾಧಿಕಾರಿಗಳು ಸುರಕ್ಷಿತವಾಗಿ ತಾಲ್ಲೂಕು ಭದ್ರತಾಕೊಠಡಿಯಲ್ಲಿಟ್ಟಿರುವುದಾಗಿ ತಿಳಿಸಿರುತ್ತಾರೆ.

ಬಿಜನಗೇರಾ ಗ್ರಾಮ ಪಂಚಾಯಿತಿಗೆ ದಿನಾಂಕ: 11.09.2020 ರಂದು ಹೊರಡಿಸಿರುವ ಮೀಸಲಾತಿ ಅಧಿಸೂಚನೆಯು ಜಿಲ್ಲಾಧಿಕಾರಿಗಳ ಮರು ವಿಚಾರಣೆಯ ಆದೇಶದಂತೆ ಪುನಃ ಜಾರಿಗೆ ಬಂದಿರುತ್ತದೆ. ಸದರಿ ಮೀಸಲಾತಿಯಂತೆ, ದಿನಾಂಕ: 14.12.2020ರ ವರೆಗೆ ನಿಯಮಾನುಸಾರ ಚುನಾವಣೆ ಪ್ರಕ್ರಿಯೆ ನಡೆದಿರುತ್ತದೆ. ದಿನಾಂಕ: 18.12.2020 ರವರೆಗೆ ಅಭ್ಯರ್ಥಿಗಳಿಗೆ ಚುನಾವಣಾ ಪ್ರಚಾರಕ್ಕೆ ಅವಕಾಶವಿರುತ್ತದೆ. ದಿನಾಂಕ: 22.12.2020 ರಂದು ನಡೆಯಬೇಕಿದ್ದ ಮತದಾನ ಮಾತ್ರ ಬಾಕಿ ಇರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಚುನಾವಣೆ ಪ್ರಕ್ರಿಯೆ ಮುಂದುವರೆಸುವುದು ಸೂಕ್ತವೆಂದು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ: ರಾಚುಆ:212:ಇಜಿಪಿ:2020,**
**ಬೆಂಗಳೂರು, ದಿನಾಂಕ: 26.12.2020**

ರಾಜ್ಯ ಚುನಾವಣಾ ಆಯೋಗವು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣ 308 ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್

ಪುಟ 3ಕ್ಕೆ...

(ಚುನಾವಣೆಯನ್ನು ನಡೆಸುವ) ನಿಯಮಗಳು, 1993ರ ನಿಯಮ 30 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ರಾಯಚೂರು ತಾಲ್ಲೂಕು, ಬಿಜನಗೇರಾ ಗ್ರಾಮ ಪಂಚಾಯಿತಿಯ ಸ್ಥಗಿತಗೊಂಡಿರುವ ಚುನಾವಣೆಯನ್ನು ಈ ಕೆಳಕಂಡ ವೇಳಾಪಟ್ಟಿಯಂತೆ ಮುಂದುವರೆಸಲು ಆದೇಶಿಸಿದೆ.

**ಚುನಾವಣಾ ವೇಳಾಪಟ್ಟಿ**

| | | |
|---|---|---|
| 1 | ಮತದಾನ ಅವಶ್ಯವಿದ್ದರೆ, ಮತದಾನವನ್ನು ನಡೆಸಬೇಕಾದ ದಿನಾಂಕ ಮತ್ತು ದಿನ (ಮತದಾನದ ಸಮಯ **ಬೆಳಿಗ್ಗೆ 7.00** ಗಂಟೆಯಿಂದ **ಸಾಯಂಕಾಲ 5.00** ಗಂಟೆವರೆಗೆ). | 28.12.2020 (ಸೋಮವಾರ) |
| 2 | ಮರು ಮತದಾನ ಇದ್ದಲ್ಲಿ ಮತದಾನದ ದಿನಾಂಕ ಮತ್ತು ದಿನ (ಸಮಯ ಬೆಳಿಗ್ಗೆ 7.00 ಗಂಟೆಯಿಂದ ಸಾಯಂಕಾಲ 5.00 ಗಂಟೆವರೆಗೆ). | 29.12.2020 (ಮಂಗಳವಾರ) |
| 3 | ಮತಗಳ ಎಣಿಕೆಯ ದಿನಾಂಕ ಮತ್ತು ದಿನ (ಬೆಳಿಗ್ಗೆ 8.00 ಗಂಟೆಯಿಂದ – ತಾಲ್ಲೂಕು ಕೇಂದ್ರಗಳಲ್ಲಿ). | 30.12.2020 (ಬುಧವಾರ) |

ಮೇಲ್ಕಂಡ ಗ್ರಾಮ ಪಂಚಾಯಿತಿ ಕ್ಷೇತ್ರಗಳ ಚುನಾವಣಾ ಅಧಿಸೂಚನೆಯನ್ನು ದಿನಾಂಕ: 07.12.2020 ರಂದು ಹೊರಡಿಸಿದ್ದು, ಆ ದಿನದಿಂದ ನಡೆದಿರುವ ಚುನಾವಣಾ ಸಂಬಂಧದ ಎಲ್ಲಾ ಪ್ರಕ್ರಿಯೆಯು ದಿನಾಂಕ: 29.12.2020 ರಂದು ನಡೆಸಲಾಗುವ ಮರು ಮತದಾನಕ್ಕೆ ಪೂರಕವಾಗಿರುತ್ತದೆ.

ಮತದಾನದ ದಿನದಂದು, ಮತದಾರರ **ಎಡಗೈ ಹೆಬ್ಬೆರಳಿಗೆ** ಅಳಿಸಲಾಗದ ಶಾಯಿ ಗುರುತನ್ನು ಮಾಡತಕ್ಕದ್ದು.

ಜಿಲ್ಲಾಧಿಕಾರಿಗಳು ಹಾಗೂ ಚುನಾವಣಾಧಿಕಾರಿಗಳು ಬಿಜನಗೇರಾ ಗ್ರಾಮ ಪಂಚಾಯಿತಿಯ ಎಲ್ಲಾ ಕ್ಷೇತ್ರದ ಅಭ್ಯರ್ಥಿಗಳಿಗೆ ಹಾಗೂ ಕ್ಷೇತ್ರದ ಎಲ್ಲಾ ಮತದಾರರಿಗೆ ಮತದಾನದ ದಿನಾಂಕ ಮತ್ತು ಸಮಯದ ಬಗ್ಗೆ ತಿಳುವಳಿಕೆ ನೋಟೀಸು ನೀಡುವುದು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವ್ಯಾಪಕ ಪ್ರಚಾರವನ್ನು ಮಾಡತಕ್ಕದ್ದು.

ಆದೇಶಾನುಸಾರ,

26/12/2020

ಅಧೀನ ಕಾರ್ಯದರ್ಶಿ
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.

**ಇವರಿಗೆ:**

(1) ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
(2) ಸಂಬಂಧಪಟ್ಟ ಚುನಾಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

**ಪ್ರತಿಯನ್ನು ಮಾಹಿತಿಗಾಗಿ:**

ಚುನಾವಣಾ ವೀಕ್ಷಕರು, ಗ್ರಾಮ ಪಂಚಾಯಿತಿ ಚುನಾವಣೆ, ರಾಯಚೂರು ಜಿಲ್ಲೆ.